ನಾವು ಕಾರಿಂದ ಇಳಿದು ಪಟ ತೆಗೆಯುವುದು ಇಷ್ಟವಾದಂತೆ ಕಾಣಲಿಲ್ಲ. ಅವರೂ ಗುರಾಯಿಸಿಕೊಂಡು ಗುಜುಗುಜು ಮಾತಾಡಿಕೊಂಡರು. ಎಲ್ಲಿ ತದಕುವರೋ ಎಂದು ಭಯವೂ ಆಯಿತು. ಪ್ರವಾಸಿಗರ ಥರಾವರಿ ಕಾಟಗಳಿಂದ ರೋಸಿ ಹೋಗಿದ್ದ ಅವರ ಮುಖಗಳು ಉರಿಯುತ್ತಿದ್ದವು. ನನಗಿಂತ ಮೊದಲೇ ಕಾರಿನಿಂದ ಧುಮುಕಿದ್ದ ಇಬ್ಬರೂ ಗೆಳೆಯರಿಗೆ ಸಿಕ್ಕ ಒಳ್ಳೆಯ ಚಿತ್ರಗಳನ್ನು ನೋಡಿದ ಮೇಲಂತೂ ನನ್ನೆದೆಯಲ್ಲಿ ಕಾರಪುಡಿ ಹಾಕಿ ಕಲಸಿದಂತಾಯಿತು.

ಫೋಟೋಗ್ರಫಿಯಲ್ಲಿ ಯಾವತ್ತೂ ಕಾರು ಡ್ರೈವ್ ಮಾಡುವ ಜಾಗದಲ್ಲಿ ಛಾಯಾಚಿತ್ರಗಾರನಿದ್ದರೆ ಹಣೇಬರವೇ ಇಷ್ಟು. ಅತಿ ಮುಖ್ಯವಾದ ಎಷ್ಟೋ ಅದ್ಭುತ ಕ್ಷಣಗಳು ಕಣ್ಣ ಮುಂದೆಯೇ ತಪ್ಪಿ ಹೋಗುತ್ತವೆ. ತುಂಬಾ ಸಲ ಅಚಾನಕ್ಕಾಗಿ ದಾರಿಯಲ್ಲಿ ಸಿಗುವ ಪ್ರಾಣಿಗಳು, ಪಕ್ಷಿಗಳು, ಕೆಲವೇ ಸೆಕೆಂಡುಗಳಷ್ಟೇ ಪೋಸುಕೊಟ್ಟು ಮರೆಯಾಗಿ ಬಿಡುತ್ತವೆ. ಕಾರು ನಿಲ್ಲಿಸಿ ಕ್ಯಾಮೆರಾ ಎತ್ತಿ ಇನ್ನೇನು ಗುರಿ ಇಡಬೇಕು ಎನ್ನುವಷ್ಟರಲ್ಲೇ ನಾವು ತೆಗೆಯಬೇಕಾದ ವಿಷಯವೇ ಮಂಗಮಾಯವಾಗಿರುತ್ತವೆ. ಇದೇ ಸಮಯದಲ್ಲಿ ಅಕ್ಕಪಕ್ಕ ಕೂತವರು ರೆಡಿ ಇಟ್ಟುಕೊಂಡ ತಮ್ಮ ಕ್ಯಾಮೆರಾದಲ್ಲಿ ಪಟಪಟ ಚಿತ್ರಗಳ ಸೆಳೆದು ಬಿಡುತ್ತಾರೆ. ಫೋಟೋಗ್ರಫಿ ಬದುಕು ಎಂದರೆ ಹೀಗೇನೆ. ನೋಡಿದ್ದನ್ನೆಲ್ಲಾ ಚಿತ್ರವಾಗಿಸುವುದು ಸಾಧ್ಯವಾಗುವುದಿಲ್ಲ. ದಕ್ಕುವುದು ಕಡಿಮೆ ಕೈ ತಪ್ಪುವುದೇ ಜಾಸ್ತಿ. ಹೀಗೆ ಅನೇಕ ಸಲ ವಿಫಲನಾಗುವ ಈ ನನ್ನ ಸೋಲು ಕೂಡ ವಿಚಿತ್ರ ಚೈತನ್ಯವಾಗಿ ನನ್ನ ಕಾಡುತ್ತದೆ. ಕಳಕೊಂಡಿದ್ದನ್ನು ಮತ್ತೆ ಹುಡುಕುವ ಸುಖ ಅದನ್ನು ತಿರುಗಿ ಪಡೆಯುವ ಹಂಬಲವೇ ಒಂದು ರೋಮಾಂಚನ.

ಅಪರೂಪದ ಮತ್ತು ಅಳಿವಿನಂಚಿನಲ್ಲಿರುವ ಈ ಕೋತಿಗಳು ತಮ್ಮ ಪೂರ್ವದ ಜೀವನದಲ್ಲಿ ಎಂದೂ ನೆಲದಮೇಲೆ ಇಳಿದವೇ ಅಲ್ಲ. ದಟ್ಟ ಕಾಡಿನ ಮರಗಳ ಮೇಲೆ ಉಯ್ಯಾಲೆ ಆಡುತ್ತಾ ಹಾರಿ ಬೆಳೆದ ಇವೀಗ ಅನಿವಾರ್ಯವಾಗಿ ನೆಲಕ್ಕೆ ಇಳಿಯಬೇಕಾಗಿದೆ. ಕಾಡಿನ ನಡುವೆ ಹೆಚ್ಚಿದ ಕಂದಕಗಳು ಅನೇಕ ಕಾಡು ಪ್ರಾಣಿಗಳ ಸ್ವಭಾವವನ್ನೇ ಬದಲಿಸಿ ಹಾಕಿವೆ. ದಟ್ಟ ಕಾಡಿನ ಅನಂತತೆಯನ್ನು ಗದ್ದೆ ತೋಟಗಳು, ಟಾರು ರಸ್ತೆಗಳು, ಬೆಳೆದ ಹಳ್ಳಿಗಳು ಕತ್ತರಿಸಿ ಬಿಟ್ಟಿವೆ. ಹೀಗಾಗಿ ಸಾವಿರಾರು ವರ್ಷಗಳ ತಮ್ಮ ಪಥವನ್ನು ಕಾಡಿನ ಜೀವಜಾಲಗಳು ತ್ಯಾಗ ಮಾಡಬೇಕಾಗಿ ಬಂದಿದೆ. ನಾಗರಿಕತೆ ರೂಪಿಸಿದ

